ನಿಯಮಗಳೇನು ಹಾಗೂ ತರಬೇತಿದಾರರಿಗೆ ನೀಡುತ್ತಿರುವ ಮಾಸಿಕ ತರಬೇತಿ ಭತ್ಯೆ ಎಷ್ಟು?

ಡಾ॥ ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು):

ಅ) ಹೌದು, ಪ್ರತಿ ವರ್ಷ ತರಬೇತಿಗಳನ್ನು ನಡೆಸುತ್ತಿಲ್ಲ. ಆದರೆ ಯಾವಾಗಲಾದರೂ ಅವಶ್ಯಕ ಎನಿಸಿದಲ್ಲಿ ತರಬೇತಿಯನ್ನು ನಡೆಸಲಾಗುವುದು.

ಆ) ಆಯುರ್ವೇದ : ಯುನಾನಿ ಪದ್ಧತಿಯಲ್ಲಿ ಔಷಧಿ ವಿತರಕರು ಮತ್ತು ಶುಶ್ರೂಷಕಿಯರ ತರಬೇತಿ ನೀಡಲಾಗುವುದು.

ಇ) ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ.ಯಲ್ಲಿ ಪಡೆದ ಅಂಕಗಳ ಆಧಾರ ಹಾಗೂ ಕಾಲಕಾಲಕ್ಕೆ ಹೊರಡಿಸಲಾಗುವ ರಾಜ್ಯ ಸರ್ಕಾರದ ಮೀಸಲಾತಿ ಆದೇಶದನ್ವಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಔಷಧಿ ವಿತರಕರುಗಳಿಗೆ ರೂ. 100-00ಗಳು ಹಾಗೂ ಶುಶ್ರೂಷಕಿಯರಿಗೆ ರೂ.250-00ಗಳು ಮಾಹೆಯಾನ ಭತ್ಯೆ ನೀಡಲಾಗುವುದು.

ವಿಷಯ: ರಾಜ್ಯದಲ್ಲಿ ವಿಶ್ವಬ್ಯಾಂಕ್ ಯೋಜನೆಯಿಂದ ಕೈಗೊಂಡಿರುವ ಕುಡಿಯುವ ನೀರಿನ ಯೋಜನೆಗಳು.

1003 (1470)

ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) 1996-97, 97-98ನೇ ಸಾಲಿನಲ್ಲಿ ವಿಶ್ವಬ್ಯಾಂಕ್ ಯೋಜನೆಯಿಂದ ಕುಡಿಯುವ ನೀರಿಗಾಗಿ ಮಂಜೂರಾತಿಯಾಗಿರುವ ಹಣವೆಷ್ಟು? ,ಅವುಗಳಲ್ಲಿ ಹಳ್ಳಿಗಳೆಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ವಿಶ್ವಬ್ಯಾಂಕ್‌ನವರ ನಿಬಂಧನೆಯಂತೆ ಗ್ರಾಮದವರು ವಂತಿಕೆಯನ್ನು ತುಂಬಿಕೊಟ್ಟಿರುವ ಹಳ್ಳಿಗಳೆಷ್ಟು ಹಾಗೂ ಕೆಲಸದ ಪ್ರಗತಿ ಎಷ್ಟು?

ಇ) ವಂತಿಕೆಯನ್ನು ತುಂಬದಿರುವ ಹಳ್ಳಿಗಳ ಬಗ್ಗೆ ಸರ್ಕಾರದ ಕ್ರಮವೇನು?

ಈ) ಈ ನಿಬಂಧನೆಯನ್ನು ಸರ್ಕಾರ ಸಡಿಲಗೊಳಿಸುವುದೆ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) 1996-97 ಹಾಗೂ 97-98ನೇ ಸಾಲಿನಲ್ಲಿ ವಿಶ್ವಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಗಳಿಗಾಗಿ ಮಂಜೂರಾತಿಯಾಗಿರುವ ಜಿಲ್ಲಾವಾರು ಹಣದ ವಿವರ ಹಾಗೂ ಗ್ರಾಮಗಳ ಸಂಖ್ಯೆ ಈ ಕೆಳಕಂಡಂತೆ ಇದೆ.

ಜಿಲ್ಲೆಯ ಹೆಸರು		ಆಯವ್ಯಯ ಹಂಚಿಕೆ 96-97 ರೂ. ಮಿಲಿಯನ್‌ಗಳಲ್ಲಿ	ಆಯವ್ಯಯ ಹಂಚಿಕೆ 97-98 ರೂ. ಮಿಲಿಯನ್‌ಗಳಲ್ಲಿ	ಒಟ್ಟು ಗ್ರಾಮಗಳು
1.	ಬೆಂಗಳೂರು ಗ್ರಾ.	53.55	43.80	75
2.	ತುಮಕೂರು	27.85	39.40	100
3.	ಶಿವಮೊಗ್ಗ	62.85	65.50	99
4.	ಮಂಡ್ಯ	77.85	67.00	100
5.	ಮೈಸೂರು	67.85	77.00	100
6.	ದಕ್ಷಿಣ ಕನ್ನಡ	72.25	79.80	90
7.	ಹಾಸನ	52.85	40.40	99
8.	ಬೆಳಗಾಂ	92.85	79.50	108
9.	ಬೀದರ್	32.75	60.00	99
10.	ಗುಲ್ಬರ್ಗಾ	73.85	80.00	106
11.	ರಾಯಚೂರು	82.85	80.60	108
12.	ಬಳ್ಳಾರಿ	117.85	51.40	109
	ಒಟ್ಟು	815.20 ಮಿಲಿಯನ್	764.40 ಮಿಲಿಯನ್	1202
	ರೂ.	81.52 ಕೋಟಿ	76.44 ಕೋಟಿ	

ಆ) ಯೋಜನೆಯಲ್ಲಿ ಒಳಗೊಂಡಿರುವ 1202 ಗ್ರಾಮಗಳ ಪೈಕಿ 986 ಗ್ರಾಮಗಳಲ್ಲಿ ವಂತಿಕೆ ಸಂಗ್ರಹಕಾರ್ಯ ಪ್ರಗತಿಯಲ್ಲಿದೆ ಹಾಗೂ ಇದುವರೆಗೆ 7.92 ಕೋಟಿ ರೂ. ವಂತಿಕೆ ಹಣ ಸಂಗ್ರಹವಾಗಿದೆ ಪ್ರಾಯೋಗಿಕ ಹಂತದ 11 ಗ್ರಾಮಗಳ ಕಾಮಗಾರಿಗಳು ಮುಕ್ತಾಯಗೊಂಡಿದ್ದು ಪ್ರಥಮ ಹಂತದ 238 ಗ್ರಾಮಗಳ ಪೈಕಿ 113 ಗ್ರಾಮಗಳ ನೀರು ಸರಬರಾಜು ಕಾಮಗಾರಿಗಳು ಮುಕ್ತಾಯಗೊಂಡಿದ್ದು ಇದರಲ್ಲಿ 42 ಗ್ರಾಮಗಳ ಯೋಜನೆಗಳು ಕಾರ್ಯಾರಂಭ ಮಾಡಿದೆ. ಎರಡನೇ ಹಂತದಲ್ಲಿನ 710 ಗ್ರಾಮಗಳ ನೀರು ಸರಬರಾಜು ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು 532 ಗ್ರಾಮಗಳ ಕಾಮಗಾರಿಗಳ ಟೆಂಡರನ್ನು ಅನುಮೋದಿಸಲಾಗಿದೆ. 175 ಗ್ರಾಮಗಳಲ್ಲಿ ಪರಿಸರ ನೈರ್ಮಲ್ಯ ಕಾಮಗಾರಿಗಳು ಪ್ರಗತಿಯಲ್ಲಿವೆ.

ಇ) ವಿಶ್ವಬ್ಯಾಂಕ್‌ನ ನಿಯಮಾವಳಿಗಳಂತೆ ಎರಡನೇ ಹಂತದಲ್ಲಿ ಸೇರಿರುವ ಗ್ರಾಮಗಳ ನೀರು ಸರಬರಾಜು ಕಾಮಗಾರಿಗಳಿಗೆ ಟೆಂಡರ್ ಕರೆಯಬೇಕಾದಲ್ಲಿ ಈ ಗ್ರಾಮಗಳು ಅವರ ಗ್ರಾಮದ ಪಾಲಿನ ವಂತಿಕೆಯ ಶೇ.25ರಷ್ಟನ್ನು ಭರಿಸಬೇಕು.

ಈ) ಇದು ವಿಶ್ವಬ್ಯಾಂಕಿನೊಂದಿಗೆ ಮಾಡಿಕೊಂಡಿರುವ ರೂಪುರೇಷೆಗಳ ಭಾಗವಾದ್ದರಿಂದ ರಾಜ್ಯ ಸರ್ಕಾರದ ವತಿಯಿಂದ ಸಡಲಿಸಲು ಬರುವುದಿಲ್ಲ.

ವಿಷಯ: ಪಂಚಾಯತ್‌ರಾಜ್ ಕಾಯಿದೆಗೆ ತಿದ್ದುಪಡಿ ಬಗ್ಗೆ ಪಿ.ಆರ್.ನಾಯಕ್ ಸಮಿತಿ ವರದಿ.

1004 (1421)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಪಂಚಾಯತ್ ರಾಜ್ ಕಾಯಿದೆಗೆ ಸಮಗ್ರ ತಿದ್ದುಪಡಿ ತರುವ ಮಸೂದೆ ಏನಾದರೂ ಸರ್ಕಾರದ ಮುಂದಿದೆಯೇ?

ಆ) ಈ ಕುರಿತು ಪಿ.ಆರ್.ನಾಯಕ್ ಸಮಿತಿ ತನ್ನ ವರದಿಯನ್ನು ಸಲ್ಲಿಸಿದೆಯೇ?

ಇ) ಸಲ್ಲಿಸಿದ್ದಲ್ಲಿ ಸರ್ಕಾರ ಈ ವರದಿಯನ್ನು ಒಪ್ಪಿಕೊಂಡಿದೆಯೇ? ಈ ಮಸೂದೆಯನ್ನು ಯಾವಾಗ ತರಲಾಗುವುದು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಈಗಾಗಲೇ ಸಮಗ್ರ ತಿದ್ದುಪಡಿ ತರಲಾಗಿದೆ.